ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ

ಸಿಸಿ ನಂಬರಃ 680/2021

ಫಿಯಾದಿಃ ಸರಕಾರ

– ವಿರುದ್ಧ –

ಆರೋಪಿ 7. ಅಶೋಕ ಗಣಪತಿ ರಾಯ್ಕುರ್ ,
ಪ್ರಾಯಃ 38 ವರ್ಷ, ವೃತ್ತಿಃ ಅಕ್ಕಸಾಲಿಗ,
ಸಾಃ ಅರೆಕೊಪ್ಪ, ಬನವಾಸಿ ರಸ್ತೆ, ತಾಃ ಶಿರಸಿ

**ದೋಷಾರೋಪಣೆ**

ನಾನು ಪ್ರಶಾಂತ ಬಾದವಾಡಗಿ, ಬಿ.ಎ..,ಎಲ್.ಎಲ್.ಬಿ.,(ಸ್ಪೇ) ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅಂಕೋಲಾ, ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುತ್ತಿದ್ದೇನೆ..

ದಿನಾಂಕಃ 7-10-2020 ರಂದು ರಾತ್ರಿ 1-30 ಗಂಟೆಗೆ ಅಂಕೋಲಾ ತಾಲೂಕಿನ ಬೆಳಸೆ ಆಗೇರ ಕಾಲೊನಿಯ ಹತ್ತಿರ ಆರೋಪಿಯಾದ ನೀವು ಉಳಿದ ಆರೋಪಿತರಾದ ಪ್ರಶಾಂತ, ಹರ್ಷಾ, ಶ್ರೀಕಾಂತ, ನಿಹಾಲ, ಸಂದೀಪ, ಗಣೇಶ ಇವರು ಫಿರ್ಯಾದಿ – ದ್ರುವ ತಂ. ಧಾಮು ಬಲಸೆ ಇವರ ಬೀಗ ಹಾಕಿದ ಮನೆಗೆ ಹೋಗಿ ಮನೆಯೊಳಗೆ ಪ್ರವೇಶಿಸಿ ಕಳ್ಳತನ ಮಾಡಿಕೊಂಡು ತಂದ ಬೆಳ್ಳಿಯ ಆಭರಣಗಳನ್ನು ಕಳುವು ಮಾಲು ಎಂದು ಗೊತ್ತಿದ್ದೂ ಸಹ ಅದನ್ನು ಆರೋಪಿತರಿಂದ ಖರೀದಿಸಿರುತ್ತೀರಿ. ಆ ಮೂಲಕ ನೀವು ಭಾ ದಂ.ಸಂ.ಕಲಂ 411 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

( ಮೇಲಿನ  ಅಪರಾಧಗಳನ್ನು ಆರೋಪಿಯಾದ ನೀವು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮತ್ತು ನನ್ನ ಸಂಜ್ಞೆಯತೆಯಲ್ಲಿ ಮಾಡಿದ್ದರಿಂದ ಸದರಿ ಅಪರಾಧಿಕ ಕಲಂಗಳ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕಃ 15.4.2023 ರಂದು ಆದೇಶಿಸುತ್ತೇನೆ.)

Sd/-

ಅಂಕೋಲಾ (ಪ್ರಶಾಂತ ಬಾದವಾಡಗಿ)

ದಿನಾಂಕಃ 15.4.2023 ಪ್ರ ದಂ ನ್ಯಾದಂ, ಅಂಕೋಲಾ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 680/2021

ಪಿರ್ಯಾದಿಃ ಸರಕಾರ – ವಿರುದ್ಧ – 7. ಅಶೋಕ ಗಣಪತಿ ರಾಯ್ಕರ್ ,

ಪ್ರ 1. ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?
ಉತ್ತರಃ ತಿಳಿಯಿತು

ಪ್ರ 2. ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?
ಉತ್ತರಃ ಸುಳ್ಳು, ವಿಚಾರಣೆಯಾಗಲಿ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

Sd/-

ಅಂಕೋಲಾ (ಪ್ರಶಾಂತ ಬಾದವಾಡಗಿ)

ದಿನಾಂಕಃ 15.4.2023 ಪ್ರ ದಂ ನ್ಯಾದಂ, ಅಂಕೋಲಾ.

ಆರೋಪಿಯ ಸಹಿ